ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಲಯ ,

ಶ್ರೀರಂಗಪಟ್ಟಣ

ಸಿ.ಸಿ.299/2023

| | | |
|---|---|---|
| ಸಿ.ಡಬ್ಲ್ಯೂ ಃ | 2 |
| ಪಿ.ಡಬ್ಲ್ಯೂ ಃ | 2 |

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಪ್ರಸನ್ನ ಕುಮಾರ |
| ತಂದೆ/ ಪತಿಯ ಹೆಸರು | ಃ | ಹೊನ್ನೆಗೌಡ |
| ವಯಸ್ಸು | ಃ | 42 ವರ್ಷ |
| ವೃತ್ತಿ | ಃ | ವ್ಯವಸಾಯ |
| ವಾಸ | ಃ | ತಡಗವಾಡಿ |

**ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 20.05.2026**

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ**

ನನಗೆ ಚಾಸಾ.1 ನನ್ನ ಹೆಂಡತಿ. ಚಾ.ಸಾ.3 ನನ್ನ ಮಾವ. ಆರೋಪಿತರು ನನ್ನ ಸಂಬಂಧಿಕರು. ಆರೋಪಿತರು ನಮ್ಮ ಮನೆಯ ಒಳಗೆ ಅತಿಕ್ರಮ ಪ್ರವೇಶ ಮಾಡಿ ಯಾವುದೇ ಗಲಾಟೆ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ. ಆರೋಪಿತರು ನಮಗೆ ಒಡಿಬಡಿ ಮಾಡಿಲ್ಲ. 2ನೇ ಆರೋಪಿಯು ಚಾ.ಸಾ.1ರವರ ಕೂದಲನ್ನು ಹಿಡಿದು ಎಳೆದಾಡಿ ಚಾ.ಸಾ.1ರವರ ಮಾನಕ್ಕೆ ಚ್ಯುತಿಯನ್ನು ಪಡಿಸಿಲ್ಲ. ಆರೋಪಿತರು ನಮಗೆ ಯಾವುದೇ ಜೀವಬೆದರಿಕೆ ಹಾಕಿರುವುದಿಲ್ಲ.

ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸ್ ರ ಮುಂದೆ ಯಾವುದೇ ದೂರನ್ನು ನೀಡಿರುವುದಿಲ್ಲ. ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಹೇಳಿಕೆ ಮತ್ತು ಮರುಹೇಳಿಕೆ ನೀಡಿಲ್ಲ. ನಾವು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ಅವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡುವಂತೆ ಕೋರಿಕೊಂಡಿದ್ದು, ಆಲಿಸಿ ಅನುಮತಿ ನೀಡಲಾಯಿತು)

<u>ಪಾಟಿ ಸವಾಲುಃ ಮಾನ್ಯ ಸ.ಸ.ಅ ರವರಿಂದ</u>

ದಿಃ 03.02.2023 ರಂದು ಸಂಜೆ 6.30 ಗಂಟೆ ಸಮಯದಲ್ಲಿ ನಾನು ಮತ್ತು ಚಾ.ಸಾ.1 ಮತ್ತು 3 ರವರು ನಮ್ಮ ಮನೆಯಲ್ಲಿ ಮಾತನಾಡುತ್ತ ಕುಳಿತ್ತಿರುವಾಗ ಆರೋಪಿತರು ಏಕಾಏಕಿ ನಮ್ಮ ಮನೆ ಒಳಗೆ ಅತಿಕ್ರಮ ಪ್ರವೇಶ ಮಾಡಿ ಗಲಾಟೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆಗ 1 ನೇ ಆರೋಪಿ ನನಗೆ ಅವಾಚ್ಯ ಶಬ್ದಗಳಿಂದ ಬೈದು ಕಬ್ಬಿಣದಿ ಕುರುಪಿಯಿಂದ ನನ್ನ ತಲೆಗೆ ಹೊಡೆದು ನೋವುಂಟು ಪಡಿಸಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಆರೋಪಿ ನನಗೆ ಅವಾಚ್ಯ ಶಬ್ದಗಳಿಂದ ಬೈದು ರಿಪಾರ್ ಪಟ್ಟಿಯಿಂದ ನನ್ನ ಬೆನ್ನಿನ ಮೇಲೆ ಮತ್ತು ಕೈಗೆ ಹೊಡೆದು ನೋವುಂಟು ಪಡಿಸಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಆರೋಪಿ ಚಾ.ಸಾ.3 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಕಲ್ಲಿನಿಂದ ಚಾ.ಸಾ.3 ರವರ ಮೂಗಿನಿಂದ ಹೊಡೆದು ನೋವುಂಟು ಪಡಿಸಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಆರೋಪಿ ಚಾ.ಸಾ.3 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ರಿಪಾರ್ ಪಟ್ಟಿಯಿಂದ ಚಾ.ಸಾ.3 ರವರ ಬೆನ್ನಿಗೆ ಹೊಡೆದು ನೋವುಂಟು ಪಡಿಸಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಆರೋಪಿ ಚಾ.ಸಾ.3 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಕಬ್ಬಿಣದಿ ಕುರುಪಿಯಿಂದ ಚಾ.ಸಾ.3 ರವರ ಕಿವಿಯ ಮೇಲೆ ಹೊಡೆದು ನೋವುಂಟು ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ನಮಗೆ ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಆರೋಪಿ ಚಾ.ಸಾ.1 ರವರ ತಲೆಯ ಕೂದಲನ್ನು ಹಿಡಿದು ಎಳೆದಾಡಿ ಚಾ.ಸಾ.1 ರವರ ಮಾನಕ್ಕೆ ಚ್ಯುತಿ ಉಂಟು ಪಡಿಸಿರುತ್ತಾರೆ ಎಂದರೆ ಸರಿಯಲ್ಲ. 2 ನೇ ಆರೋಪಿ ಚಾ.ಸಾ.1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ತನ್ನ ಕೈಯಿಂದ ಚಾ.ಸಾ.1 ರವರ ಕತ್ತಿನ ಮೇಲೆ ಹೊಡೆದಿರುತ್ತಾರೆ ಎಂದರೆ ಸರಿಯಲ್ಲ. 1 ನೇ ಆರೋಪಿ ತನ್ನ ಕೈಯಿಂದ ಚಾ.ಸಾ.1 ರವರ ಬೆನ್ನಿನ ಮೇಲೆ ಗುದಿ ನೋವುಂಟು ಪಡಿಸಿರುತ್ತಾರೆ ಎಂದರೆ ಸರಿಯಲ್ಲ.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾವು ಚಾ.ಸಾ.1 ರಿಂದ 3 ಚಿಕಿತ್ಸೆಯನ್ನು ಪಡೆದಿರುತ್ತೇವೆ ಎಂದರೆ ಸರಿಯಲ್ಲ.

ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿಃ 06.02.2023 ರಂದು ಈ ಮೇಲೆ ಹೇಳಿದಂತೆ ನಿಪಿ-4 ರಂತೆ ಪೋಲಿಸರ ಮುಂದೆ ಮರುಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಚಾ.ಸಾ.1 ಮತ್ತು 3 ರವರು ಆರೋಪಿತರೊಂದಿಗೆ ಈಗ ರಾಜಿ ಆಗಿರುತ್ತೇವೆ ಎಂದರೆ ಸರಿ. ನಿಪಿ-4 ರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಗೋ

ತ್ತಿದ್ದರು ಸಹಾ ಆರೋಪಿತರೊಂದಿಗೆ ರಾಜಿ ಆಗಿರುವುದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೇ ಎಂದರೆ ಸರಿಯಲ್ಲ.

<u>ಪಾಟೀಸವಾಲು ಃ ಆರೋಪಿ ಪರ ವಕೀಲರಿಂದ</u>

ಆರೋಪಿ ಪರ ವಕೀಲರು ಪಾಟೀಸವಾಲು ಇಲ್ಲಎಂದು ತಿಳಿಸಿದ್ದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.